ಪಟ್ಟಿ ರೆಡಿಯಾಗಿತ್ತು. ಫಸ್ಟ್ ಲಿಸ್ಟ್, ಸೆಕೆಂಡ್ ಲಿಸ್ಟ್, ಥರ್ಡ್ ಲಿಸ್ಟ್... ಹೀಗೆ. ಶಂಕಿತರ ಪಟ್ಟಿ ಹಿಡಿದುಕೊಂಡು, ಒಬ್ಬೊಬ್ಬರ ಮೇಲೇ ಮುಗಿಬಿದ್ದು, ಹಿಗ್ಗಾಮುಗ್ಗಿ ಚಚ್ಚಿ, ಅವ್ರಲ್ಲಾ ಇವ್ರಲ್ಲಾ ಅಂತ ಲಿಸ್ಟಲ್ಲಿ ಒಂದೊಂದೇ ಹೆಸರು ಹೊಡೆದುಹಾಕಿ, ಕೊನೆಗೆ ಉಳಿದ ಯಾರೋ ಒಬ್ಬರ ಮೇಲೆ ಚಾರ್ಜ್ ಶೀಟ್ ಹಾಕಿ ಕೋರ್ಟ್‌ನಲ್ಲಿ ಸರಿಯಾಗಿ ಸಾಬೀತು ಮಾಡಲಾಗದೆ, ಜಡ್ಜ್ ಮುಂದೆ ಮುಖಭಂಗವಾಗೋದು, ನಿಶ್ಚಿತವಾಗಿಯೂ ಅದು ಮಾಯಣ್ಣನ ವಿಧಾನ ಅಲ್ಲ. ಮಾಯಣ್ಣನ ಪ್ರಕಾರ ಅದು ಬೌದ್ಧಿಕ ಸೋಮಾರಿತನ. ಒಬ್ಬೊಬ್ಬನೇ ಶಂಕಿತನ ಹಿನ್ನೆಲೆಯನ್ನು ಕೆತ್ತಿ ಕೆದಕಿ, ಅವನ ಪರಿಸ್ಥಿತಿ, ದಿನಚರಿ, ಹಿನ್ನೆಲೆ, ಘಟನೆಗಳನ್ನು, ಸ್ಥಳ–ಸಮಯಗಳ ಆಯಾಮಗಳೊಡನೆ ತಾಳೆ ಮಾಡಿ, ಅಪರಾಧದೊಡನೆ ತಳುಕು ಹಾಕಬಹುದಾದ ಕೊಂಡಿಗಳು ಕಂಡರೆ ಮಾತ್ರ ಮುಂದುವರಿಯುವವನು ಮಾಯಣ್ಣ. ಇದಕ್ಕೆ ಅಗತ್ಯವಾದ ತಾಳ್ಮೆ ಮತ್ತು ತಾರ್ಕಿಕ ಮನಸ್ಸು, ಜೊತೆಗೆ ವೈಜ್ಞಾನಿಕ ವಿಚಾರಣಾ ಮತ್ತು ತನಿಖಾ ವಿಧಾನಗಳ ಅರಿವು, ಇವೆಲ್ಲಾ ಮಾಯಣ್ಣನಿಗೆ ಇದ್ದೇ ಇತ್ತು. ಮುಂದಿನ ನಡೆಗಳ ಬಗ್ಗೆ ಯೋಚನೆ ಮಾಡುತ್ತಾ ಸಾಕಷ್ಟು ದಣಿದಿದ್ದ ಮಾಯಣ್ಣ ರಾತ್ರಿ ಸುಮಾರು ಎರಡು ಗಂಟೆಗೆ, ತನಗರಿವಿಲ್ಲದಂತೆಯೇ ತನ್ನ ಕುರ್ಚಿಯಲ್ಲೇ ಗಾಢ ನಿದ್ದೆಗೆ ಬಿದ್ದಿದ್ದ. ಮಾರನೇ ಬೆಳಿಗ್ಗೆ ಮೊಬೈಲ್ ಫೋನ್ ಒಂದೇ ಸಮನೆ ರಿಂಗಣಿಸುತ್ತಿದ್ದಾಗಲೇ ಮಾಯಣ್ಣನಿಗೆ ಎಚ್ಚರವಾಗಿದ್ದು.

‘ರೀ ಎಲ್ಲಿದ್ದೀರಾ?’

ಹೆಂಡತಿ ಸೌಜನ್ಯಳ ಫೋನು.

‘ಸ್ಟೇಷನ್ನಲ್ಲಿ.’

‘ಏನ್ ಮಾಡ್ತಿದ್ರೀ?’

‘ನಿದ್ದೆ.’

‘ಅಯ್ಯೋ ಶಿವನೇ... ನಮ್ಮಪ್ಪ ನೈಟ್ ಡ್ಯೂಟಿ ಬಿದ್ದಾಗ ವಾರ್ಡ್ ಆಫೀಸಲ್ಲೋ ಇಲ್ಲಾ ಪಂಪೌಸಲ್ಲೋ ಮಲಿಕ್ಕೊಂಡು ಬೆಳಿಗ್ಗೆ ಎದ್ಬಂದ್ರೆ ಏನೇನೆಲ್ಲಾ ಮಾತಾಡ್ಕೊಳೋವ್ರು. ಇವಾಗ್ ನೋಡ್ರಪ್ಪಾ ಬೆಳ್ಬೆಳುಗ್ಗೆನೇ ನಿದ್ದೆ. ಅದೂ ಸ್ಟೇಷನ್ನಾಗೆ.’

‘ವೋಗ್ಲಿ ಆ ಅಮ್ಮು ಕೊಲೆಗಾರನ್ನ ಇಡುದ್ಬುಟ್ರಾ?’

‘ಬಿಡ್ತೀವ ಮತ್ತೆ, ಹಿಡ್ದಿದ್ದೂ ಆಯ್ತು, ಕಟಕಟೆಲಿ ನಿಲ್ಸಿದ್ದೂ ಆಯ್ತು.’

‘ಆಮೇಲೆ?’

‘ಆಮೇಲಿನ್ನೇನು ಜಡ್ಜ್ ಹೇಳೇಬಿಟ್ರೂ.’

‘ಏನಂತಾ?’

‘ಮಾಯಣ್ಣ ನಾಳೇನೋ ನಾಡಿದ್ದೋ ಸ್ವಲ್ಪ ಬಿಡುವು ಮಾಡ್ಕೊಂಡು ಅವನನ್ನ ನೇತಾಕ್ಬುಡ್ರೀ ಅಂತಾ.’

‘ನಿಮಗೇ ಎಲ್ಲಾನು ನಗ್ಸಾರನೇ ಆಗೋಯ್ತು. ನಾನೇನ್ ಗುಗ್ಗೂನ. ನಮ್ಮಪ್ಪಾ ಅದೇ ಸ್ಟೇಷನ್ನಾಗೆ ಹೆಡ್ ಕಾನ್ಸ್‌ಟೆಬಲ್ ಆಗಿದ್ದೋವ್ರೂ ಅನ್ನೋದು ಗ್ಯಪ್ತಿ ಇರ್ಲೀ.’

‘ನಿನ್ನಾ, ನಿಮ್ಮಪ್ಪನ್ನಾ ಗುಗ್ಗೂ ಅಂದವ್ರೇ

## ಕಳೆದ ಸಂಚಿಕೆಯಲ್ಲಿ



ಅಮೃತಾಳ ಕೊಲೆಯ ಪ್ರಕರಣ ಮಾಯಣ್ಣನಿಗೆ ಸವಾಲಾಗಿ ಪರಿಣಮಿಸಿತ್ತು. ಕೊಲೆ ನಡೆದಾಗ ತನಿಖಾಧಿಕಾರಿ ವಹಿಸಬೇಕಾದ ಎಲ್ಲ ಮುನ್ನೆಚ್ಚರಿಕೆಗಳನ್ನು ಕೈಗೊಂಡ. ಅಮೃತಾ ವಾಸವಾಗಿದ್ದ ಮನೆಯ ಮಾಲೀಕರನ್ನು ಮಾತನಾಡಿಸಿದ. ಅವರಿಂದ ಹೆಚ್ಚಿನ ಸುಳಿವು ಸಿಗಲಿಲ್ಲ. ಆದರೆ, ಅಮೃತಾಳ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಕಮಲಾಳಿಂದ ಸಾಕಷ್ಟು ಮಾಹಿತಿ ದೊರೆಯಿತು. ತನ್ನನ್ನು ಕೆಲಸದ ಮಹಿಳೆಯೆಂದು ಕಾಣದೆ, ಸಹೋದರಿಯಂತೆ ನಡೆಸಿಕೊಳ್ಳುತ್ತಿದ್ದ ಅಮೃತಾಳ ಬಗ್ಗೆ ಕಮಲಾ ಭಾವುಕವಾಗಿ ಮಾತನಾಡಿದಳು. ಅಮೃತಾ ಮತ್ತು ಅವಳ ಬಾಯ್ ಫ್ರೆಂಡ್ ನಡುವೆ ಆಗಾಗ ಜಗಳ ನಡೆಯುತ್ತಿದ್ದುದನ್ನೂ, ಮಲತಾಯಿ ಹಾಗೂ ಆಕೆಯ ತಮ್ಮನ ಕುರಿತೂ ಹೇಳಿದಳು. ಕಮಲಾಳ ಮಾತುಗಳಿಂದ ಮಾಯಣ್ಣನಿಗೆ ಅಮೃತಾಳ ವ್ಯಕ್ತಿತ್ವದ ಪರಿಚಯವಾಯಿತು. ಕೊಲೆ ನಡೆದ ಸ್ಥಳದ ಪ್ರಾಥಮಿಕ ತನಿಖೆ ಚುರುಕಾಗಿ ನಡೆಯಿತು. ಅಲ್ಲಿ ದೊರೆತ ಸಾಕ್ಷ್ಯಗಳನ್ನು ಸಂಗ್ರಹಿಸಲಾಯಿತು. ಆದರೆ, ಅಪರಾಧದ ಸ್ಥಳಕ್ಕೆ ಬಂದ ಪೊಲೀಸ್ ನಾಯಿಗೆ ಕೊಲೆಗೆ ಬಳಸಿದ ವಸ್ತುವನ್ನು ಪತ್ತೆ ಹಚ್ಚುವುದು ಸಾಧ್ಯವಾಗಲಿಲ್ಲ.

ಗುಗ್ಗೂಗುಳು ತಗೋ. ಇರೊ ಬರೋ ಬುದ್ಧಿನೆಲ್ಲಾ ಖರ್ಚು ಮಾಡಿ ನನ್ನನ್ನ ಈ ಮದುವೆ ಗುಂಡೀಲಿ ಕೆಡುವ್ಕೊಂಬಿಟ್ರೀ.’

‘ಏನು ಸೀಮೆಗಿಲ್ದಿದ್ ಗಂಡು ನೀವ್ರೂ... ಇನ್ನಾ ನಮ್ಮಪ್ಪಾನೇ ಯಾಮಾರುದ್ರೇನೋ... ನನ್ನಾ ಗಿಣೀ ಅಂಗ್ ಸಾಕಿ ಗಿಡುಗುಂಗ್ ಕೊಟ್ಟಂಗೆ, ನಿಮುಗ್ ಕೊಟ್ಟವ್ರೇ ತಿಳ್ಕೊಳೀ.’

‘ಆಯ್ತು ನಿನ್ನ್ಮಗ ಏನಂತಾನೆ?’

‘ನಮ್ಮಪ್ಪ ಯಾವಾಗ ಹೊಸಾ ಮನೆ ಕಟ್ಟೀ ಕರ್ಕೊಂಡೋಗ್ತಾನೆ ಅಂತಾನೆ.’

‘ಅವ್ನ್ ತಲೆಗೂ ಹುಳಾ ಬಿಟ್ಟೇ ಅನ್ನೂ.’

‘ನೀವು ತಾನೆ ಆ ಕ್ವಾಟ್ರರ್ಸ್ ಮನೆಲಿ ಒಬ್ರೇ ಏನ್ಮಾಡ್ತೀರಾ?’

‘ನಾನೇನು ಒಬ್ಬನೇ ಇಲ್ವಲ್ಲಾ?’

‘ಅಂಗಂದ್ರೇ?’

‘ಒಂದು ಸಾವಿರ ಸೊಳ್ಳೆ, ಒಂದು ನೂರು ಜಿರಳೆ ಜೊತೆಗೆ ಲಿವಿಂಗ್ ಇನ್ ರಿಲೇಶನ್‌ನಲ್ಲಿದ್ದೀನಿ.’

‘ತೊಳ್ದೂ ಬಳ್ದೂ ಒಪ್ಪ ಮಾಡ್ಕೊಂಡ್ರಾಯ್ತೂ... ಅದೊಂದು ಕತೆ ಮಾಡ್ಬೇಡಿ.’

‘ಸರಿ ಇಕ್ಕು ಫೋನು... ಆಗಲೇ ಏಳು ಗಂಟೆ, ಕ್ವಾಟ್ರಸ್ಗೋಗಿ ಮತ್ತೆ ಬಂದು ಕೆಲಸ ನೋಡಬೇಕು.’

ಮಾಯಣ್ಣ ಕ್ವಾಟ್ರಸ್ಸಿಗೆ ಹೋಗಿ ನಿತ್ಯಕರ್ಮಗಳನ್ನೆಲ್ಲಾ ಮುಗಿಸಿ ಮತ್ತೆ ಒಂಬತ್ತಕ್ಕೆ ಸರಿಯಾಗಿ ಸ್ಟೇಷನ್ನಿಗೆ ಬಂದಿದ್ದ. ಹಿಂದಿನ ದಿನ ತಡರಾತ್ರಿಯವರೆಗೂ ಅಮ್ಮುವಿನ ಕೊಲೆಯ ತನಿಖೆಗೆ ಸಂಬಂಧಪಟ್ಟಂಥ ಒಂದಲ್ಲಾ ಒಂದು ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರೂ ಮತ್ತೆ ಎಲ್ಲಾ ಸಿಬ್ಬಂದಿ, ಒಬ್ಬರೂ ತಡವಾಗದಂತೆ ಆಗಲೇ ಬಂದಿಳಿದಿದ್ದರು.

‘ವಿನಯ್... ಅಮ್ಮು ಅವರ ಓಲ್ಡ್ ಫ್ರೆಂಡ್ ಸಿತಾರ ಅವರ ಹತ್ತಿರ ಮಾತಾಡ್ಬೇಕು... ಆದರೆ ಈಗ ಇಲ್ಲಿ ಲೇಡಿ ಕಾನ್ಸ್‌ಟೆಬಲ್ಸ್ ಇಲ್ಲದೇ ಇರೋದ್ರಿಂದ ಅವರನ್ನ ಇಲ್ಲಿಗೆ ಕರ್ಸೊದರ ಬದಲು ಅಲ್ಲಿಗೇ ಹೋಗಿ ನೋಡೋದು ಸರಿಯೇನೊ’.

‘ಸಾರ್ ಅಮ್ಮು ಮನೆ ಮಾಲಿಕರ ಮನೇನೇ ಬೆಟರ್ ಅನ್ಸುತ್ತೆ’.

‘ನೀವು ಹೇಳೋದು ಸರಿ... ಹೇಗಿದ್ರೂ ನಾವು ಅಲ್ಲಿಗೆ ಹೋಗಿ ಅಮ್ಮು ಅವರ ವೆಹಿಕಲ್ಸ್ ಸರ್ಚ್ ಮಾಡಬೇಕು... ಅವರಿಗೆ ಅಲ್ಲಿ ಬರೋದುಕ್ಕೆ ಹೇಳಿ.’

‘ಯೆಸ್ ಸಾರ್.’

ವಿನಯ್ ಮತ್ತು ಮಾಯಣ್ಣ ಜೀಪ್‌ನಲ್ಲಿ ಕೊಲೆ ನಡೆದ ಬಿಲ್ಡಿಂಗ್‌ಗೆ ಬಂದಾಗ ಸಿತಾರ ಆಗಲೇ ಬಂದು ಕಾಯುತ್ತಿದ್ದಳು. ವೆಹಿಕಲ್ಸ್ ಸರ್ಚ್ ಮುಗಿಸಿ ಒಳಗೆ ಹೋಗಿ ಕುಳಿತ ತಕ್ಷಣ ಮನೆಯೊಡತಿ ಸತ್ಯವತಿ ಅವರು ಕಾಫಿ ತಂದಿಟ್ಟರು. ಅದು ಇದು ಪ್ರಾಸ್ತಾವಿಕ ಮಾತುಗಳು ಮುಗಿಯುತ್ತಿದ್ದಂತೆ ಸಿತಾರ ಯಾವುದೇ ಹಮ್ಮುಬಿಮ್ಮು ಇಲ್ಲದ ಟಿಪಿಕಲ್ ಮಧ್ಯಮವರ್ಗ ಕುಟುಂಬದ ಸೆಂಟಿಮೆಂಟಲ್ ಹುಡುಗಿ ಎಂದು ಅನಿಸಿತ್ತು.

ಆತ್ಮೀಯ ಗೆಳತಿಯ ದುರ್ಮರಣದಿಂದ ಸಾಕಷ್ಟು ನೊಂದು ನಲುಗಿ ಕೆಳಗೆ ಹಾಕಿದ ಮುಖದಲ್ಲಿನ ಒದ್ದೆ ಕಣ್ಣುಗಳು, ಈ ಮಾತುಕತೆ ಕಷ್ಟವೇನೋ ಎಂದಿತ್ತು.

‘ನಾವು ಮಾತಾಡೋದು ರೆಕಾರ್ಡ್ ಮಾಡಿಕೊಳ್ತೀವಿ, ಆಮೇಲೆ ರೆಫೆರನ್ಸ್‌ಗೆ ಬೇಕಾಗುತ್ತದೆ. ಅಷ್ಟಕ್ಕೂ ಇದು ವಿವರಗಳನ್ನ, ಮಾಹಿತಿಗಳನ್ನ ಕಲೆ ಹಾಕುವ ಕೆಲಸ ಅಷ್ಟೇ... ನೀವು, ಅಮ್ಮು ಅವರ ಅಂತರಂಗದ ಗೆಳತಿ ಅಂತ ತಿಳೀತು. ನಿಮ್ಮಿಂದ ಏನೂ ಹಿಡಿದಿಡದೇ ಎಲ್ಲವನ್ನೂ ಚರ್ಚೆ ಮಾಡಿರ್ತಾರೆ ಅಂತ ನಮ್ಮ ಊಹೆ.’

‘ಹೌದು, ನಮ್ಮ ಮಧ್ಯೆ ಏನು ಸೀಕ್ರೇಟ್ಸ್ ಇರ್ತಿರಲಿಲ್ಲ ಅನ್ಸುತ್ತೆ... ನಮಗೆ ಒಬ್ಬರಿಗೊಬ್ಬರು ಬಿಟ್ಟರೆ ಬೇರೆ ಯಾರೂ ಇಲ್ಲ ಅನ್ನೋ ಹಾಗಿದ್ವಿ.’

‘ಅಮ್ಮು ಸಂತೋಷವಾಗಿದ್ರಾ ಅಥವಾ ಅವರನ್ನ ಏನಾದ್ರೂ ಕಾಡ್ತಾಯಿತ್ತಾ?’

‘ವಾರಕ್ಕೆ ಒಂದು ಸಾರಿ ಆದ್ರೂ ಒಬ್ಬರನ್ನೊಬ್ಬರು ನೋಡ್ತಾಯಿದ್ವೀ... ನಮ್ಮಿಬ್ಬರಿಗೂ ಹೊಸರುಚಿ ಅಡುಗೆಗಳನ್ನು ಮಾಡಿ ಪರಸ್ಪರ ವಿನಿಮಯ, ವಿಮರ್ಶೆ ಮಾಡಿಕೊಳ್ಳುವುದು ಒಂದು ರೂಢಿ. ಈ ನಡುವೆ ಅಂದರೆ ಮೂರು ತಿಂಗಳಿಂದ ಅಮ್ಮು ಒಂದು ರೀತಿ ವಿಷಾದ, ಆತಂಕದಲ್ಲಿರೋ ತರ